# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಓ.ಎಸ್.102/18

ಸಾಕ್ಷಿಯನ್ನು ದಿಃ 23.02.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-

ಈ ದಿನ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು,ಅವುಗಳನ್ನು,

| | |
|---|---|
| ನಿಪಿ.42 ರಿಂದ 50 | ಜಮೀನಿನ 9 ಭಾವಚಿತ್ರಗಳು |
| ನಿಪಿ.51 | ಸಿ.ಡಿ. ಎಂದು ಗುರುತಿಸಲಾಯಿತು. |

## ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್. ವೈ. ಅವರಿಂದ-

1. ಕೃಷಿ ಸಮ್ಮಾನ ಯೋಜನೆಯಡಿಯಲ್ಲಿ ಪ್ರತಿ ಖಾತೆದಾರರಿಗೆ ನೇರವಾಗಿ ಅವರ ಖಾತೆಗೆ ವಾರ್ಷಿಕವಾಗಿ ಕೇಂದ್ರ ಸರಕಾರದಿಂದ ವತಿಯಿಂದ ರೂ.6,000/- ಖಾತೆಗೆ ಬರುತ್ತದೆ ಎಂದರೆ ಸರಿ. ಈ ಸಂಬಂಧ ಸದರಿ ಯೋಜನೆಯಡಿಯಲ್ಲಿ ನಾನು ಯಾವುದೇ ಹಣ ಪಡೆಯತ್ತಿಲ್ಲ ಎಂದರೆ ಸರಿ. ಜಮೀನು ನನ್ನ ತಾತನ ಹೆಸರಿನಲ್ಲಿ ಇರುವುದರಿಂದ ನಾನು ಯಾವುದೇ ಹಣ ಪಡೆಯುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾತನ ಹೆಸರಿನಲ್ಲಿ ಜಮೀನು ಇದೇ ಎಂದು ತೋರಿಸಲು ಯಾವುದೇ ಆರ್.ಟಿ.ಸಿ ಹಾಜರುಪಡಿಸಿಲ್ಲ.

2. ನನ್ನ ತಾತನ ಹೆಸರಿನಲ್ಲಿ ಯಾವೂದೇ ಜಮೀನುಗಳಿಲ್ಲ. ಈಗಾಗಲೇ ಸದರಿ ಜಮೀನುಗಳನ್ನು ಸೈಟುಗಳಾಗಿ ಪರಿವರ್ತಿಸಿ ಮಾರಾಟ ಮಾಡಲಾಗಿದೆ ಎಂದರೆ ಅದನ್ನು ಬೋಗಸ್ ಮಾಡಿ ಸೃಷ್ಟಿ ಮಾಡಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಬೋಗಸ್ ದಾಖಲಾತಿಗಳಿಗೆ ಸಂಬಂಧಪಟ್ಟಂತೆ ನಾನು ಬೇರೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯರು ಬೋಗಸ್ ದಾಖಲಾತಿಗಳನ್ನು ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳಿಲ್ಲ ಎಂದರೆ ಸರಿ. ಈ ಬಗ್ಗೆ ನಾನು

ವಾದಪತ್ರದಲ್ಲಿ ಹೇಳದೆ ಈಗ ಬೋಗಸ್ ದಾಖಲಾತಿಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸಾಮಾನ್ಯವಾಗಿ ಜಮೀನಿನಲ್ಲಿ ಬೆಳೆದ ಬೆಳೆಗಳ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿಲ್ಲ ಎಂದರೆ ನಾನು ವ್ಯವಸಾಯಗಾರನಲ್ಲ, ಬೆಳೆ ಬೆಳೆದಿದ್ದರೆ ನನಗೆ ಈ ವಿಷಯ ಗೊತ್ತಿರುತ್ತಿತ್ತು ಎಂದರೆ ನಾನು ವ್ಯವಸಾಯಗಾರ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.42ರ ಭಾವಚಿತ್ರದಲ್ಲಿ ಮೆಣಸಿನಕಾಯಿ ಗಿಡಗಳನ್ನು ಬೆಳೆಯಲಾಗಿದೆ. ನಾನು ಹಾಜರುಪಡಿಸಿರುವ ಭಾವಚಿತ್ರದಲ್ಲಿ ಕಾಣುತ್ತಿರುವ ಯಾವುದಾದರೂ ಬೆಳೆಗಳ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದು ಮಾಡಲಾಗಿದೆಯಾ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.42 ರಿಂದ 50 ಭಾವಚಿತ್ರಗಳನ್ನು ನಾನು ಹಾಗೂ ನಮ್ಮ ಹುಡುಗ ತೆಗೆದಿರುತ್ತೇವೆ. ಸದರಿ ಭಾವಚಿತ್ರಗಳನ್ನು 6 ತಿಂಗಳ ಹಿಂದೆಯೇ ತೆಗೆದಿರುತ್ತೇವೆ. ಆದರೆ ದಿನಾಂಕ ಮತ್ತು ತಿಂಗಳು ನೆನಪಿಲ್ಲ.

4. ಸದರಿ ಭಾವಚಿತ್ರಗಳಲ್ಲಿ ಯಾವುದೇ ಸರ್ವೇ ನಂಬರುಗಳನ್ನು ನಮೂದು ಮಾಡಿಲ್ಲ. ದಾವಾ ಜಮೀನಿಗೆ ಹಾಗೂ ನಿಪಿ.42 ರಿಂದ 50ಕ್ಕೆ ಸಂಬಂಧ ಇಲ್ಲ, ದಾವಾ ಜಮೀನು ಅನ್ಯಕ್ರಾಂತವಾಗಿರುವ ಜಮೀನಾಗಿದ್ದು, ಅದು ವ್ಯವಸಾಯ ಮಾಡುವ ಜಮೀನಾಗಿರುವುದಿಲ್ಲ, ನಾನು ಬೇರೆ ಜಮೀನಿನ ಭಾವಚಿತ್ರಗಳನ್ನು ತೆಗೆದು ಅದು ದಾವಾ ಜಮೀನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ.42 ರಿಂದ 50 ಅನ್ನು ಯಾವಾಗ ಹಾಗೂ ಯಾವ ಜಮೀನಿಗೆ ಸಂಬಂಧಪಟ್ಟಂತೆ ತೆಗೆದಿರುವುದು ಎಂದು ನನಗೆ ಗೊತ್ತಿಲ್ಲದಿದ್ದರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಕೇವಲ ವ್ಯವಸಾಯ ಮಾಡುತ್ತೇನೆ ಅದು ಬಿಟ್ಟು ಬೇರೆ ಯಾವ ಕೆಲಸ ಮಾಡುತ್ತಿಲ್ಲ. ನಾನು ಪೈಂಟರ್ ಕೆಲಸ ಕೂಡ ಮಾಡುತ್ತೇನೆ ಎಂದರೆ ಅದನ್ನು ಬಿಟ್ಟುಬಿಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ವ್ಯವಸಾಯಗಾರ ಎಂದು

ತೋರಿಸಲು  ಯಾವುದೇ ದಾಖಲಾತಿಗಳು ಇಲ್ಲ, ಆದರೆ ನಾನು ವ್ಯವಸಾಯಗಾರ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ವ್ಯವಸಾಯಗಾರನಲ್ಲ ಮೂಲತಃ ಪೈಂಟರ್ ಆಗಿದ್ದು, ಈಗ ವ್ಯವಸಾಯಗಾರ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯಗಾರನಾಗಿದ್ದರೆ ಸರಕಾರದಿಂದ ರೈತರಿಗೆ ನೀಡುವಂತಹ ಅನೇ ಸವಲತ್ತುಗಳನ್ನು ಪಡೆಯುತ್ತಿದ್ದೆ ಎಂದರೆ ನನ್ನ ಹೆಸರನಲ್ಲಿ ಆರ್.ಟಿ.ಸಿ. ಇಲ್ಲ ಆದ್ದರಿಂದ ಸವಲತ್ತುಗಳನ್ನು ಪಡೆದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.  ನಾನು ಯಾವುದೇ ಸವಲತ್ತುಗಳನ್ನು ಪಡೆಯದೆ ಇರುವುದರಿಂದ ನಾನು ರೈತನೆ ಅಲ್ಲ ಎಂದರೆ ಸರಿಯಲ್ಲ. ನಿಪಿ.42 ರಿಂದ 51 ಕ್ಕೆ ಹಾಗೂ ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲದಿದ್ದರೂ ಅವುಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**ಪಾಟೀಸವಾಲುಃ 7 ನೇ ಪ್ರತಿವಾದಿ ಪರ ಶ್ರೀಮತಿ ಎಸ್.ಎಸ್.ಅವರು ಬಿ.ಎಸ್.ವೈ ಅವರು ಮಾಡಿದ ಪಾಟೀಸವಾಲನ್ನು ಅಳವಡಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.